ಸಾಧಾರಣ ರೂಪಿನ ಮಾಲಾ ಅವರ ದೃಷ್ಟಿಯಲ್ಲಿ ಪಾತಾಳಕ್ಕೆ ಕುಸಿದಿದ್ದಳು. ಆದರೆ ನನ್ನ ಆಲೋಚನೆಗಳು ಸ್ಪಷ್ಟವಾಗಿದ್ದವು. ನಾನು ನನಗಷ್ಟೇ ಅಲ್ಲ, ನನ್ನ ತಾಯಿ, ತಂದೆಯರು, ಹಳ್ಳಿಯ ಮನೆಗೆಲ್ಲ ಹೊಂದುವಂಥ ಹುಡುಗಿಯನ್ನೇ ಆರಿಸಿದ್ದೆ. ನನ್ನ ಆಯ್ಕೆ ಸರಿಯಾಗಿತ್ತು. ತಾಳಮೇಳಗಳೊಂದಿಗೆ... ಇಂದಿಗೂ.

ಸುದ್ದಿ ತಿಳಿದ ಅಜಯನ ಸ್ನೇಹಿತರು ಅವನನ್ನು ಏರ್‌ಪೋರ್ಟಿನಿಂದ ನಡೆದ ಘಟನೆಗಳನ್ನು ಹೇಳುತ್ತ... ಸಾಂತ್ವನಿಸುತ್ತಲೇ ಕರೆತಂದರು. ಭೋರೆಂದು ಅಳುತ್ತ ಬಂದು ಅಪ್ಪನನ್ನು ತಬ್ಬಿದ ಮಗ. ಸೊಸೆ ಕೂಡ ಮಕ್ಕಳನ್ನಪ್ಪಿಕೊಂಡು ಅಳುತ್ತಿದ್ದಳು. ಆಗಲೇ ಬಂದ ನನ್ನಪ್ಪ, ಅವ್ವ ಕೂಡ ಕಣ್ಣೀರು ಸುರಿಸಿದರು. ನೆಂಟರಿಷ್ಟರೆಲ್ಲ ಬರುವಷ್ಟರಲ್ಲಿ ನಾನು ಕಾಕಾನ ಜೊತೆ ಹೋಗಿ 'ಬಾಡಿ' ತೆಗೆದುಕೊಂಡು ಬಂದೆ. ಬಿಳಿಬಟ್ಟೆಯಲ್ಲಿ ಮುದ್ದೆಯಾಗಿ ಮಲಗಿದ್ದ ಕಾಕೂಳನ್ನು ಕಂಡು ಮನೆಯಲ್ಲಿ ಮತ್ತೆ ಪ್ರವಾಹ ಭೋರ್ಗರೆಯಿತು. ಅವ್ವ ಹಸಿರು ಸೀರೆಯುಡಿಸಿ, ಕಾಸಗಲ ಕುಂಕುಮವಿಟ್ಟು, ಮಲ್ಲಿಗೆ ಮುಡಿಸಿ ಅಲಂಕರಿಸಿದಳು. ಪುರೋಹಿತರು ಬಂದು ವಿಧಿಪೂರ್ವಕವಾಗಿ ಅಜಯನ ಕೈಯಿಂದ ಎಲ್ಲ ಕಾರ್ಯವನ್ನು ಸಾಂಗವಾಗಿ ಮಾಡಿಸಿದರು. ಹಾಗೇ ಹತ್ತು, ಹನ್ನೊಂದು, ಹನ್ನೆರಡನೇ ದಿನಗಳೊಂದಿಗೆ ವೈಕುಂಠ ಸಮಾರಾಧನೆಯೂ ಮುಗಿದೇ ಹೋಯಿತು. ಬಂದವರೆಲ್ಲ ಕಾಕಾ ಮತ್ತು ಅಜಯನ ಬೆನ್ನ ಮೇಲೆ ಕೈಯಾಡಿಸುತ್ತ, "ಏನ್ ಬೇಕಾದ್ರೂ ಕೇಳಪಾ... ನಾವೆಲ್ಲಾ ಇದ್ದೇವಿ" ಎಂದು ಧೈರ್ಯ ಹೇಳಿ ಹೊರಟರು. ದೊಡ್ಡ ಫೋಟೊದಲ್ಲಿ ಕಾಕು ನಗುತ್ತಿದ್ದುದು ಕಣ್ಣಿಗೆ ಕಟ್ಟಿದಂತಿತ್ತು.

ಕಾಲಚಕ್ರ ತಿರುಗುತ್ತಿದ್ದಂತೆ ಜೀವನ ಮಾಮೂಲಿಗೆ ಬಂದಿತ್ತು. ಕಾಕೂನ ಪ್ರೀತಿಯ ಮನೆ ಇದ್ದ ಸ್ಥಳದಲ್ಲೇ ಅಜಯ ಪಾರ್ಟನರ್‌ಗಳ ಜೊತೆ ಬಿಸಿನೆಸ್ ಆರಂಭಿಸಿದ್ದ. ಚೆನ್ನಾಗೂ ನಡೆದಿತ್ತು. ಮಕ್ಕಳು ಸ್ಕೂಲು ಸೇರಿದ್ದವು. ಅಕಸ್ಮಾತ್ ಒಂದು ದಿನ ಕಾಕಾನ ಫೋನ್ ಬಂತು. "ನಾಳೆ ಖಾಲಿ ಇದ್ದಿ ಏನು? ರಜಾ ಹಾಕಿ ಸ್ವಲ್ಪ ಮನಿಗೆ ಬಾ. ಅಜಯ ಸಂಸಾರ ಸಮೇತ ಮದವಿಗೆ ಹೋಗ್ಯಾನ. ನನಗ ಒಂದ ಕಡೆ ಹೋಗೋದದ..." ಎಂದರು. ಮರುಮಾತಿಲ್ಲದೆ ಮ್ಯಾನೇಜರ್‌ಗೆ ರಜೆ ಹೇಳಿ ಮರುದಿನ ಕಾರು ತೆಗೆದುಕೊಂಡು ಹೊರಟು ಬಂದೆ. ಇಬ್ಬರೂ ಹೊರಗೇ ಊಟ ಮುಗಿಸಿದೆವು. "ಎಲ್ಲಿ ಹೋಗೋದದ ಕಾಕಾ?" ಎಂದೆ. "ನಂದಿ ಹಿಲ್ಸ್‌ಗೆ ಹೋಗೋಣೋ..." ಎಂದರು. ನನ್ನೆದೆ ಧಸಕ್ ಎಂದಿತು. "ಬ್ಯಾಡ ಕಾಕಾ. ಇನ್ನೂ ಮೂರು ತಿಂಗಳಾಗಿಲ್ಲಾ. ಮತ್ತೆಲ್ಲಾ ನೆನಪಾಗಿ ನಿಮಗ ತ್ರಾಸಾಗ್ತದ" ಎಂದೆ. "ಇಲ್ಲೋ... ಇವು ಕೆಲವೆಲ್ಲಾ ಅಕಿ ಪ್ರೀತಿವು ಸಾಮಾನು ತಂದೇನಿ. ಇವನ್ನೂ ಅಕಿ ಹೋದಲ್ಲೇ ಕಳಿಸಿಬಿಡೋಣಂತ. ನೀ ಏನಂತಿ... ನಗ್ರೀಯೋ ಏನೋ... ಖರೇ ಇದು ನನ್ನ ನಂಬಿಕಿ ನೋಡು. ಅಲ್ಲೇ ಸ್ವಲ್ಪ ಹೊತ್ತು ಕೂತು ಮಾತಾಡೋಣು. ನನಗ ನಿನ್ನೊಂಬ್ಬಾಂವನ ಜೋಡೀನ ಮಾತಾಡೋದದ ನಡಿ" ಎಂದರು. ನಿರುಪಾಯನಾಗಿ ಕಾರು ಓಡಿಸಿದೆ.

ನಂದಿ ಬೆಟ್ಟದ ನೆತ್ತಿ ಮುಟ್ಟಿದಾಗ ನಾಲ್ಕು ಗಂಟೆಯಾಗಿತ್ತು. ದೇವಾಲಯಕ್ಕೆ ಕೈ ಮುಗಿದು ಕಾಕಾ ಟಿಪ್ಪು ಡ್ರಾಪ್ ಬಳಿಯೇ ಬಂದರು. ದೀರ್ಘವಾಗಿ ನೋಡುತ್ತ, "ಅವತ್ತ ಇಲ್ಲೇ ಕೂತಿದ್ವಿ..." ಎನ್ನುತ್ತ ಕುಳಿತುಕೊಂಡರು. ನಾನೂ ಕುಳಿತೆ. ಸುತ್ತ ಜನಸಂಚಾರವೂ ಕಡಿಮೆ ಇತ್ತು. ಬ್ಯಾಗಿನಿಂದ ಬಾಟಲ್, ಗ್ಲಾಸ್ ಹೊರತೆಗೆದರು ಕಾಕಾ. ನಾನು ಸುಮ್ಮನೇ ನೋಡುತ್ತಿದ್ದೆ. ಒಂದೆರೆಡು ಪೆಗ್ ಒಳಗೆ ಹೋಗುತ್ತಿದ್ದಂತೆ ಅಳು ಹೊರಗೆ ಬಂತು. ನಾನು ಅವರನ್ನು ಸಂತೈಸುವಂತೆ ಬೆನ್ನ ಮೇಲೆ ಕೈಯಾಡಿಸಿ, "ಸಾಕು ಕಾಕಾ" ಎಂದು ಬಾಟಲ್ ಎತ್ತಿ